

ಮೂನ್ ವ್ಯಾಲಿಯ ಅಪೂರ್ವ ಭೂದೃಶ್ಯ

## ಪೆಡ್ರೋ ಸ್ಮರಣೆಯ ಚೌಕ

ಲಾ ಪಾಜ್ ನಗರದ ಕೇಂದ್ರ ಸ್ಥಳವಾದ ಪ್ಲಾಜಾ ಮುರಿಲ್ಲೊ ಚೌಕದಲ್ಲಿ ನಿಂತರೆ ನಮಗೆ ಪ್ರಮುಖ ಕಟ್ಟಡಗಳಾದ ಪ್ರೆಸಿಡೆನ್ಶಿಯಲ್ ಪ್ಯಾಲೇಸ್, ನ್ಯಾಷನಲ್ ಕಾಂಗ್ರೆಸ್ ಆಫ್ ಬೊಲಿವಿಯ ಮತ್ತು ಕ್ಯಾಥೆಡ್ರಲ್ ಆಫ್ ಲಾ ಪಾಜ್‌ಗಳನ್ನು ನೋಡಬಹುದು.

ಬೊಲಿವಿಯ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪೆಡ್ರೋ ಮುರಿಲ್ಲೊ ಅವರನ್ನು ಸ್ಪ್ಯಾನಿಷರು 29 ಜನವರಿ 1810ರಂದು ಇದೇ ಚೌಕದಲ್ಲಿ ನೇಣುಹಾಕಿದ್ದರು. 'ದೇಶವಾಸಿಗರೇ, ನಾನು ಸಾಯುತ್ತೇನೆ. ಆದರೆ, ಈ ದುರುಳರಿಗೆ ನಾನು ಹೊತ್ತಿಸಿದ ಸ್ವಾತಂತ್ರ್ಯ ಜ್ಯೋತಿಯನ್ನು ನಂದಿಸಲು ಸಾಧ್ಯವಾಗುವುದಿಲ್ಲ. ಸ್ವಾತಂತ್ರ್ಯ ಚಿರಾಯು' ಎಂದು ಸಾಯುವ ಮುನ್ನ ಮುರಿಲ್ಲೊ ಹೇಳಿದ್ದರು. ಪೆಡ್ರೋ ಗೌರವಾರ್ಥವಾಗಿ ಅವರ ಹೆಸರನ್ನು ಈ ಚೌಕಕ್ಕೆ ಇಡಲಾಗಿದೆ.

ಬೊಲಿವಿಯದ ರಾಜಕೀಯ ಅಧಿಕಾರದ ಕದನಗಳಿಗೆ, ರಕ್ತಸಿಕ್ತ ಅಧ್ಯಾಯಗಳಿಗೆ ಈ ಪ್ಲಾಜಾ ಸಾಕ್ಷಿಯಾಗಿದೆ. 1946ರಲ್ಲಿ ನಡೆದ ದಂಗೆಯಲ್ಲಿ ಅಂದಿನ ಅಧ್ಯಕ್ಷ ಗುವಾಲ್ಬರ್ಟೊ ವಿಲ್ಲಾರೊಯೆಲ್ ಅವರನ್ನು ಈ ಪ್ಲಾಜಾದ ದೀಪಸ್ತಂಭಕ್ಕೆ ನೇಣು ಹಾಕಿ ಕೊಲ್ಲಲಾಯಿತು.

ಈ ಪರ್ವತ ಪ್ರದೇಶ ಹೆಚ್ಚಾಗಿ ಜೇಡಿಮಣ್ಣಿನಿಂದ ಕೂಡಿದ್ದು ನಿರಂತರ ಸವಕಳಿಯಿಂದಾಗಿ ಚಿತ್ರ ವಿಚಿತ್ರ ರೂಪಾಂತರಗಳನ್ನು ಹೊಂದಿದೆ. ಚೂಪು ಚೂಪಾದ ಬಿಳಿಯ ಬಣ್ಣಗಳ ಚಿಮಣಿಗಳಂತೆ ಕಾಣುವ ಈ ಅಸಾಮಾನ್ಯ ಭೂದೃಶ್ಯವನ್ನು ಕಂಡ, ಚಂದ್ರನ ಮೇಲೆ ನಡೆದ ಮೊದಲ ಗಗನಯಾತ್ರಿ ನೀಲ್ ಆರ್ಮ್‌ಸ್ಟ್ರಾಂಗ್, 'ಇದು ಚಂದ್ರನ ಮೇಲಿರುವಂತೆಯೇ ಇದೆ' ಎಂದು ಇದಕ್ಕೆ 'ವ್ಯಾಲಿ ಆಫ್ ದಿ ಮೂನ್' ಎಂದು ಕರೆದರಂತೆ.



ಪ್ಲಾಜಾ ಮುರಿಲ್ಲೊ ಬಳಿಯಿರುವ ಕ್ಯಾಥೆಡ್ರಲ್

## ಇಂಡಿಯಾ ಪಾಕಿಸ್ತಾನಿ ಭಾಯಿ ಭಾಯಿ

ನಾವು ಲಾ ಪಾಜ್ ನಗರ ವೀಕ್ಷಣೆ ಮಾಡುವಾಗ ಮಧ್ಯಾಹ್ನದ ಊಟಕ್ಕೆ 'ಹವೇಲಿ' ಎಂಬ ಭಾರತೀಯ ಹೋಟೆಲ್‌ಗೆ ಹೋದೆವು. ಆ ನಗರದಲ್ಲಿ ಐದಾರು ಭಾರತೀಯ ಹೋಟೆಲ್‌ಗಳಿವೆ. ಪಂಜಾಬ್ ಮೂಲದ ವ್ಯಕ್ತಿ ಮತ್ತು ಪಾಕಿಸ್ತಾನಿ ಒಟ್ಟಿಗೇ ನೆಲೆಸಿದ್ದು, ಹೋಟೆಲ್ ನೋಡಿಕೊಳ್ಳುತ್ತಿದ್ದಾರೆ. ಇದರೊಂದಿಗೆ ದಕ್ಷಿಣ ಅಮೆರಿಕದ ಚಿಲಿ, ಪೆರು, ಬೊಲಿವಿಯಗಳಲ್ಲಿ ಸಿಗುವ ಚಿನ್ನದ ವ್ಯಾಪಾರ ಕೂಡ ಅವರು ಮಾಡುವರಂತೆ. ಭೂಗೋಳದ ವಿರುದ್ಧ ದಿಕ್ಕಿನಲ್ಲಿ ನೆಲೆಸಿರುವ ಭಾರತೀಯರು, ನಮ್ಮ ನೆರೆ ರಾಷ್ಟ್ರದವರೊಂದಿಗೆ ಇಲ್ಲಿ ಅಣ್ಣತಮ್ಮಂದಿರಂತೆ ಇದ್ದಾರೆ. ಜೊತೆಗೆ ಇಷ್ಟು ದೂರ ಬಂದು ಚಿನ್ನದ ವ್ಯಾಪಾರ ಮಾಡುವ ಇವರು ನಿಜಕ್ಕೂ ಸಾಹಸಿಗರು ಅನ್ನಿಸಿತು.

ಪ್ರತಿಕ್ರಿಯಿಸಿ: **feedback@sudha.co.in**